ಶ್ರೀ ಬಿ. ಪಿ. ಗಂಗಾಧರ್.—ನಿಮ್ಮ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಡಾಕ್ಟರುಗಳನ್ನು ಸೇರಿಸಿಕೊಳ್ಳುವುದಕ್ಕೆ ಏನಾದರೂ ಏಜ್ ರಿಸ್ಟ್ರಿಕ್ಷನ್ ಇದೆಯೇ ? ಹಾಗೇನಾದರೂ ಇಲ್ಲದೇ ಹೊದರೆ 40–45 ವರ್ಷ ಆಗಿದ್ದವರನ್ನು ರೆಕ್ರೂಟ್ ಮಾಡಿಕೊಂಡು ಎಲ್ಲೆಲ್ಲ ಅಗತ್ಯವೋ ಅಲ್ಲಿಗೆ ಪೋಸ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪೈ. ರಾಮಕೃಷ್ಣ.—ಕಾನೂನು ತಿದ್ದುಪಡಿ ಆಗಬೇಕಾಗುತ್ತದೆ. ಏಜ್ ರಿಸ್ಟ್ರಿಕ್ಷನ್ ಇದೆ. ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಎ. ಚೆನ್ನೇಗ ಡ.—ಗ್ರಾಮಾಂತರ ಪ್ರದೇಶದಲ್ಲಿ ಮಹಿಳಾ ಡಾಕ್ಟರುಗಳ ಅಭಾವ ಇದೆಯೆಂದು ಹೇಳಿದಿರಿ. ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುವುದಕ್ಕೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುವುದಕ್ಕೆ ಇನ್ನೂ ಹೆಚ್ಚಿನ ಸಂಬಳ ಮತ್ತು ಸೌಲಭ್ಯಗಳನ್ನು ಕೊಡುವುದಕ್ಕೆ ಸರ್ಕಾರದವರು ತಯಾರಿದ್ದೀರಾ ?

ಶ್ರೀ ಪೈ. ರಾಮಕೃಷ್ಣ.—ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಸಂಬಳ ಕೊಡಬೇಕೋ ಅಷ್ಟು ಕೊಡುತ್ತಾ ಇದ್ದೇವೆ. ಜಾಸ್ತಿ ಕೊಡುವುದಕ್ಕಾಗುವುದಿಲ್ಲ. ಅವರ ಸಂಬಳಸಾರಿಗೆ ವಿಚಾರ ಪೇ ಕಮೀಷನ್ ಮುಂದೆ ಇದೆ.

Tank near Sangameshwara

197. **Sri F. S. PATIL** (Kalghatgi).—

Will the Minister of State for Minor Irrigation be pleased to state :—

(*a*) whether it has come to their notice that survey was conducted and plan and estimates prepared since several years for conctructing a tank near Sangameshwara in Kalghatgi Taluk ;

(*b*) the year in which the survey work of the said tank was started for the first time ;

(*c*) the estimated area that will be irrigated by the said tank as per the survey ;

(*d*) whether plan and estimates of the said tank have been prepared ;

(*e*) the estimated cost that may be incurred for the construction of the said tank ;

(*f*) when the work of the said tank will be commenced ?

A.—**Sri A. J. DODDAMETI** (Minister of State for Minor Irrigation).—

(*a*) Yes.
(*b*) During 1963-64.
(*c*) About 1,535 acres.
(*d*) Yes.
(*e*) Rs. 8,19,400 approximately.
(*f*) After the plans and estimates are approved and funds provided in the Budget Estimates.

ಶ್ರೀ ಎಫ್. ಎಸ್. ಪಾಟೀಲ್.—ಬೇಸಿಗೆದಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ ಕಲಗ್ಗಿಟ್ ತಾಲ್ಲೂಕಿನ ಸಂಗಮೇಶ್ವರ ಗ್ರಾಮದ ಹತ್ತಿರ ಕೆರೆಯ ಯೋಜನೆಯನ್ನು ಈ ವರ್ಷದ ಬಜೆಟ್ಟಿನಲ್ಲಿ ಸೇರಿಸಲಾಗುವುದೇ ?

† ಶ್ರೀ ಎ. ಜೆ. ದೊಡ್ಡಮೇಟಿ.— 1969–70ನೇ ಸಾಲಿನ ಬಡ್ಜೆಟ್ಟಿನಲ್ಲಿ ಈ ಯೋಜನೆಗೆ ಪ್ರಾಶಸ್ತ್ಯ ಕೊಟ್ಟು ಸೇರಿಸಲಿಕ್ಕೆ ಪರಿಶೀಲನೆ ಮಾಡುತ್ತೇನೆ.

ಶ್ರೀ ನದಾಶಿವಪ್ಪ ಪಾಟೀರ್.—ಈ ಕೆಲಸ 1963–64ನೇ ಸಾಲಿನಲ್ಲಿ ಸರ್ವೆ ಆಯಿತು. 1965–66 ರಲ್ಲಿ ಎಸ್ಟಿಮೇಟ್ ಆಗಿರಬೇಕು. ತಾವು ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎ. ಜೆ. ದೊಡ್ಡಮೇಟಿ.—ಇದರಲ್ಲಿ ಒಂದು ವಿಷಯ ತಿಳಿದುಕೊಳ್ಳಬೇಕು. ಒಂದು ಕೆಲಸ ಪ್ರಾರಂಭ ಮಾಡುವುದಕ್ಕಿಂತ ಮೊದಲು ಯಾವಯಾವ ಕೆಲಸಗಳು ಬಡ್ಜೆಟ್ಟಿನಲ್ಲಿ ನಮೂದಿಸಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. 1968–69 ರಲ್ಲಿ ನಮೂದಿಸದೇ ಇದ್ದರೆ 69–70ರ ಬಡ್ಜೆಟ್ಟಿನಲ್ಲಿ ಸೇರಿಸುವುದಕ್ಕೆ ಇದಕ್ಕೆ ಪ್ರಾಶಸ್ತ್ಯ ದೃಷ್ಟಿಯಿಂದ ವಿಚಾರ ಮಾಡುತ್ತೇನೆ. ಏಕೆಂದರೆ ಸಾಕಷ್ಟು ಫೀನಬಿಲಿಟಿ ಸ್ಕೀಮುಗಳು ಈಗಾಗಲೇ ಇವೆ. ಇನ್ನೊಂದು ಸ್ಪಷ್ಟವಾದ ಮಾತು ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು 150 ಲಕ್ಷ ಕೊಡುತ್ತೇವೆ ಎಂದು ಹೇಳಿದ್ದಕ್ಕೇ, ನನ್ನ ಹತ್ತಿರ ಆಗಲೇ 150 ಅರ್ಜಿಗಳು ಬಂದಿವೆ. ಆದರೆ ಅವೆಲ್ಲವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಕ್ರಮ ಇದೆ. ಈ ಚಿಕ್ಕ ನೀರಾವರಿ ಬಗ್ಗೆ ಕಾರ್ಯ ತೆಗೆದುಕೊಳ್ಳಲಿಕ್ಕೆ ಅಂದಾಜು ಪತ್ರಿಕೆಗಳು ಇವೆ. ಈ ಅಂದಾಜು ಪತ್ರಿಕೆಯಲ್ಲಿ ಪ್ಲಾನ್, ಎಸ್ಟಿಮೇಟ್ ಮಂಜೂರಾಗಬೇಕು. ಅದಾದಮೇಲೆ ಅವುಗಳನ್ನು ಸಾಮಾನ್ಯವಾಗಿ ತೆಗೆದುಕೊಳ್ಳುತ್ತೇವೆ. ಅವು ಪ್ಲಾನ್‌ನಲ್ಲಿ ಸೇರಿದ್ದರೂ ಏನೇನೋ ಕಾರಣಾಂತರಗಳಿಂದ ಅವೆಲ್ಲವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸಬ್‌ಸ್ಟಿಟ್ಯೂಟ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಸಿದ್ದವೀರಪ್ಪ.—ಏಕೆ ಇಷ್ಟು ದೀರ್ಘವಾದ ಭಾಷಣ. ಇದು ಉತ್ತರವೇ. ಇದು ದೀರ್ಘ ಭಾಷಣವಾಯಿತು.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಸದಸ್ಯರಿಗೆ ಸಮಾಧಾನ ಮಾಡಬೇಕಾದ್ದಿಲ್ಲವೇ ? ಸಮಾಧಾನ ಮಾಡದೇ ಇದ್ದರೆ ಜಗಳ ಆಡುತ್ತಾರೆ. ಈ ದೃಷ್ಟಿಯಿಂದ ದೀರ್ಘವಾದ ಉತ್ತರ ಕೊಡಬೇಕಾಗಿದೆ. ಉತ್ತರ ಕೊಟ್ಟು ಸಮಾಧಾನ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಕೇರ್ಸಿಟಿ ಕೆಲಸಗಳ ಪ್ರಕಾರ ಕೆಲವು ಚಿಕ್ಕ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆ ಪಟ್ಟಿದ್ದೀರಿ. ಆದ್ದರಿಂದ ಈ ಯೋಜನೆಗಳನ್ನು ಸ್ಕೇರ್ಸಿಟಿ ಕೆಲಸಗಳಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜೆ. ದೊಡ್ಡಮೇಟಿ.—ಸ್ಕೇರ್ಸಿಟಿ ಪ್ರಕಾರ 10–20 ಸಾವಿರ ರೂಪಾಯಿ ಖರ್ಚು ಮಾಡುವುದು. ಮುಂದಿನ ಹಣ ಎಲ್ಲಾ ನಾವು ಕೊಡಬೇಕಾಗುತ್ತದೆ. ಆದ್ದರಿಂದ ಮುಂದಿನ ಬಜೆಟಿನಲ್ಲಿ ಸೇರಿಸುವ ಕಾಲಕ್ಕೆ ಎಲ್ಲಾ ವಿಚಾರ ಮಾಡುತ್ತೇವೆ.

Vacant post of Deputy Commissioners

198. **Sri S. R. BOMMAI** (Kundgol).—

Will the Chief Minister be pleased to state :—

(*a*) whether it is a fact that about 11 posts of Deputy Commissioners are vacant in the State;

(*b*) whether these posts are not filled up since long though a number of officers are eligible for these posts and the High Court has also directed to give promotion to these officers;

(*c*) whether it is a fact that the reasons for not filling up these posts is that the majority of the officers eligible for promotion to the posts of Deputy Commissioner are from Bombay-Karnatak area ?